ಧರಿಸುವುದಕ್ಕೆ ಹೆಚ್ಚು ಕಂಫರ್ಟ್ ಎಂದರೆ ಎ ಲೈನ್ ಕುರ್ತಾ. ಇದಕ್ಕೆ ಮ್ಯಾಚಿಂಗ್ ಆಗಿರುವ ಟ್ರೌಸರ್ಸ್ ಧರಿಸಿದರೆ ಉತ್ತಮ. ಹಬ್ಬಗಳ ಸಂದರ್ಭದಲ್ಲಿ ಈ ಉಡುಪು ಮೆರುಗು ನೀಡುತ್ತದೆ. ಸಿಂಪಲ್ ಆಗಿಯೂ ಸ್ಟೈಲಿಷ್ ಆಗಿಯೂ ಕಾಣಿಸಿಕೊಳ್ಳಬಹುದು. ಇದಕ್ಕೆ ನೀವು ಹೀಲ್ಸ್ ಹಾಕಿಕೊಳ್ಳಬಹುದು. ಹಾಗೇ ಜುಮ್ಕಾ, ಬ್ರೇಸ್ಲೆಟ್ಸ್ ಧರಿಸಿದರೆ ಸುಂದರವಾಗಿ ಕಾಣಬಹುದು.

ಪಠಾಣಿ ಕುರ್ತಾ ಹಾಗೂ ಪ್ಯಾಂಟ್

ಕಪ್ಪು ಪ್ರಿಂಟ್ ಇರುವ ಪಠಾಣಿ ಕುರ್ತಾ ದೈನಂದಿನ ಉಡುಪಾಗಿ ಧರಿಸಬಹುದು. ಇದು ಕಂಫರ್ಟ್ ಡ್ರೆಸ್ ಆಗಿರುವುದರಿಂದ ಸ್ಟೈಲಿಷ್ ಲುಕ್ ಅನ್ನೂ ನೀಡುತ್ತದೆ. ಆ್ಯಂಕಲ್ ಲೆಂತ್ ಪ್ಯಾಂಟ್ ಕಚೇರಿಗಳಿಗೆ ಹಾಕಿಕೊಂಡು ಹೋಗುವುದಕ್ಕೆ ಚೆನ್ನಾಗಿರುತ್ತದೆ. ಹೀಲ್ಸ್, ಎಥ್ನಿಕ್ ಆ್ಯಕ್ಸೆಸರೀಸ್, ಗೋಲ್ಡ್ ಕಲರ್ ವಾಚ್ ಇದಕ್ಕೆ ಸೂಕ್ತ ಎನಿಸುತ್ತದೆ.

## ಎಲೈನ್ ಸಿಲ್ಕ್ ಕುರ್ತಾ ಹಾಗೂ ಟ್ರೌಸರ್ಸ್



ಪಾರ್ಟಿ ಹಾಗೂ ಹಬ್ಬಗಳಿಗೆ ಹೆಚ್ಚು ಸೂಕ್ತವಾಗುವಂತದ್ದು ಸಿಲ್ಕ್ ಕುರ್ತಾ. ಇದು ಗ್ರ್ಯಾಂಡ್ ಲುಕ್ ಕೊಡುತ್ತದೆ. ಸಾಕಷ್ಟು ಬಗೆಯ ಬಣ್ಣಗಳು ಈ ಸಿಲ್ಕ್ ಕುರ್ತಾದಲ್ಲಿ ಸಿಗುವುದರಿಂದ ಚೆಂದವಾಗಿ ಕಾಣಿಸಿಕೊಳ್ಳಬೇಕು ಎಂಬ ಹಂಬಲ ಇರುವವರಿಗೆ ಈ ಕುರ್ತಾ ಹೇಳಿ ಮಾಡಿಸಿದ್ದು. ಇದಕ್ಕೆ ಟ್ರೌಸರ್ಸ್ ಹೆಚ್ಚು ಸೂಕ್ತವಾಗಿ ಹೊಂದಿಕೆಯಾಗುತ್ತದೆ. ಡಿನ್ನರ್ ಪಾರ್ಟಿಗಳಿಗೆ ಹೋಗುವವರು ಸಹ ಇದನ್ನು ಧರಿಸಬಹುದು. ಹೀಲ್ಸ್ ಸ್ಯಾಂಡಲ್ಸ್, ದೊಡ್ಡ ಇಯರ್ ರಿಂಗ್ಸ್ ಇದಕ್ಕೆ ಚೆನ್ನಾಗಿ ಹೊಂದಿಕೆಯಾಗುತ್ತದೆ.

## ಬ್ರೋಕೆಡ್ ಕುರ್ತಾ, ಫ್ರಂಟ್ ಸಿಲ್ಟ್ ಪ್ಯಾಂಟ್

ಸ್ಟೈಲಿಷ್ ಲುಕ್ ಬೇಕು ಎನ್ನುವವರಿಗೆ ಈ ಬ್ರೋಕೆಡ್ ಕುರ್ತಾ ಹೇಳಿ ಮಾಡಿಸಿದ್ದು. ಯಾವುದೇ ಪ್ರಿಂಟ್ ಅಥವಾ ಡಿಸೈನ್ ಇಲ್ಲದೆಯೂ ಈ ಕುರ್ತಾ ತುಂಬಾ ಚೆನ್ನಾಗಿ ಕಾಣುತ್ತದೆ. ಹಬ್ಬದ ಸಂದರ್ಭದಲ್ಲಿ ಇದನ್ನು ಧರಿಸಬಹುದು. ಹೆಚ್ಚೇನೂ ಆ್ಯಕ್ಸೆಸರೀಸ್ ಇದಕ್ಕೆ ಅಗತ್ಯವಿಲ್ಲ. ಫ್ರಂಟ್ ಸಿಲ್ಟ್ ಇರುವ ಪ್ಯಾಂಟ್ ಜೊತೆಗೆ ಗೋಲ್ಡನ್ ವೆಡ್ಜಸ್ ಧರಿಸಿದರೆ ಮತ್ತಷ್ಟೂ ಅಂದವಾಗಿ ಕಾಣಬಹುದು.

## ಡಿಸೈನರ್ ಕುರ್ತಾ ಹಾಗೂ ಪ್ಯಾಂಟ್

ಎಷ್ಟೇ ದಿರಿಸಿದ್ದರೂ ಒಂದು ಡಿಸೈನರ್ ಕುರ್ತಾ ಇದ್ದರೆ ಅದರ ಚೆಂದಾನೇ ಬೇರೆ! ಎಲ್ಲರ ವಾರ್ಡ್ ರೋಬ್‌ನಲ್ಲಿಯೂ ಒಂದು ಡಿಸೈನರ್ ಕುರ್ತಾ ಹೆಚ್ಚಾಗಿ ಇದ್ದೇ ಇರುತ್ತದೆ. ಈ ಡಿಸೈನರ್ ಕುರ್ತಾಗೆ ಟ್ರೌಸರ್ಸ್ ಚೆನ್ನಾಗಿ ಹೊಂದಿಕೆಯಾಗುತ್ತದೆ. ಇದು ಮದುವೆ ಹಾಗೂ ಹಬ್ಬದ ಸಂದರ್ಭದಲ್ಲಿ ಧರಿಸುವುದಕ್ಕೆ ಚೆನ್ನಾಗಿರುತ್ತದೆ. ಇದಕ್ಕೆ ಹೀಲ್ಸ್, ಮ್ಯಾಚಿಂಗ್ ಬ್ಯಾಗ್ ಹಾಕಿಕೊಂಡರೆ ಸ್ಟೈಲಿಷ್ ಲುಕ್ ನಿಮ್ಮದಾಗುತ್ತದೆ.

## ಟುಲಿಪ್ ಪ್ಯಾಂಟ್ ಹಾಗೂ ಕುರ್ತಾ

ಮಾಡರ್ನ್ ಡ್ರೆಸ್ ಇಷ್ಟಪಡುವವರಿಗೆ ಈ ಟುಲಿಪ್ ಪ್ಯಾಂಟ್ ಹಾಗೂ ಕುರ್ತಾ ಹೆಚ್ಚು ಸರಿಹೊಂದುತ್ತದೆ. ಟುಲಿಪ್ ಪ್ಯಾಂಟ್‌ಗೆ ಶಾರ್ಟ್ ಟಾಪ್ ಹಾಕಿಕೊಂಡರೆ ಸುಂದರವಾಗಿ ಕಾಣಿಸಿಕೊಳ್ಳಬಹುದು. ಇದು ಪಾರ್ಟಿಗಳಿಗೆ ಹೋಗುವವರಿಗೆ ಹೇಳಿಮಾಡಿಸಿದ್ದು. ಗೋಲ್ಡ್ ವೆಡ್ಜಸ್ ಹಾಗೂ ಚಾಂದಬಲೀಸ್ ಮತ್ತು ಬ್ರೇಸ್ಲೆಟ್ ಹಾಕಿಕೊಂಡರೆ ಸಖತ್ ಲುಕ್ ಕೊಡುತ್ತದೆ.

## ಲಾಂಗ್ ಕುರ್ತಾ-ಪ್ಯಾಂಟ್

ಉದ್ದನೆಯ ಕುರ್ತಾ ಇಷ್ಟಪಡುವವರಾದರೆ ಇದಕ್ಕೆ ಟ್ರೌಸರ್ಸ್ ಚೆನ್ನಾಗಿ ಹೊಂದಿಕೆಯಾಗುತ್ತದೆ. ಡಿಸೈನ್ ಹಾಗೂ ಎಂಬ್ರಾಯಿಡರಿ ಲಾಂಗ್ ಕುರ್ತಾ ಹಬ್ಬದ ಸಂದರ್ಭಗಳಲ್ಲಿ ಚೆನ್ನಾಗಿ ಕಾಣುತ್ತದೆ. ಇದಕ್ಕೆ ಜುಮ್ಕಾ, ಹೀಲ್ಸ್ , ಬ್ರೇಸ್ಲೆಟ್ಸ್ ಹಾಕಿಕೊಂಡರೆ ಚೆನ್ನಾಗಿರುತ್ತದೆ.

ಹರೀಮ್ ಪ್ಯಾಂಟ್ ಹಾಗೂ ಕುರ್ತಾ ಇದೊಂದು ರೀತಿಯ ಹೊಸ ಸ್ಟೈಲ್ ಪ್ಯಾಂಟ್. ಕ್ಯಾಶುವಲ್ ಲುಕ್‌ನಿಂದ ಬೇಜಾರಾದವರು ಈ ದಿರಿಸನ್ನು ಪ್ರಯತ್ನಿಸಿ ನೋಡಿ. ಈ ಉಡುಗೆ ವಿಭಿನ್ನವಾಗಿರುವುದರಿಂದ ನೋಡುವುದಕ್ಕೆ ಸುಂದರವಾಗಿ ಕಾಣುತ್ತದೆ. ಇದಕ್ಕೆ ನೀವು ಲೂಫರ್ಸ್ ಹಾಗೂ ಸ್ಲಿಂಗ್ ಬ್ಯಾಗ್ ಧರಿಸಬಹುದು. ■


SANDHILIN सन्धिलिन
ಸಂಧಿಲಿನ್

ಸಂಧಿಲಿನ್ ಹಚ್ಚಿ
ನೋವಿಗೆ
ವಿದಾಯ
ಹೇಳಿ!

ಶೀಘ್ರ ಪರಿಣಾಮಕಾರಿ




- ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ.
- ಕಳೆದ 14 ವರ್ಷಗಳಿಂದ ಲಕ್ಷಾಂತರ ಜನರ ಪ್ರಥಮ ಆಯ್ಕೆ.
- 'ಸಂಧಿಲಿನ್' ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM™ AYURVEDA PHARMACY

ISO / GMP CERTIFIED

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ